ಅ) ಅಂತಹ ಯಾವುದೇ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿಲ್ಲ.

ಇ) 2000ದ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ 59(18)ನೇ ಪ್ರಕರಣದಡಿ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ವಿಶ್ವವಿದ್ಯಾಲಯಗಳು ಸಂಯೋಜನೆ ಅಥವಾ ಮುಂದುವರಿಕೆ ಸಂಯೋಜನೆಯನ್ನು ವಿದ್ಯಾರ್ಥಿ ಪ್ರಮಾಣದೊಂದಿಗೆ ನಿರ್ಧರಿಸಬೇಕು. ಸಂಯೋಜನೆ ರಹಿತವಾಗಿ ವಿದ್ಯಾರ್ಥಿಗಳ ಪ್ರವೇಶ ಪಡೆದಲ್ಲಿ ಸದರಿ ಅಧಿನಿಯಮದ 60(2)ನೇ ಪ್ರಕರಣದೊಂದಿಗೆ ಓದಲಾದ 1992ರ ಕರ್ನಾಟಕ ಮಾನ್ಯತೆ ರಹಿತ ಮತ್ತು ಅಸಂಯೋಜಿತ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿ ಪ್ರವೇಶ ನಿಷೇಧ ಅಧಿನಿಯಮದ 3 ಮತ್ತು 4ನೇ ಪ್ರಕರಣದಡಿ ಶಿಕ್ಷಾರ್ಹ ಅಪರಾಧವಾಗಿದೆ.

ಈ) ಹೌದು.

ವಿಶ್ವ ಬ್ಯಾಂಕ್ ನೆರವಿನಿಂದ ಕುಡಿಯುವ ನೀರಿನ ಯೋಜನೆಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1119(1511)

ಸದಸ್ಯರ ಹೆಸರು: ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ)

ಉತ್ತರಿಸುವ ಸಚಿವರು: ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಪ್ರಶ್ನೆ

ಅ) ವಿಶ್ವಬ್ಯಾಂಕ್ ನೆರವಿನಿಂದ ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಜಾರಿಗೊಳಿಸಲಾಗಿದೆ? ಜಿಲ್ಲಾವಾರು ವಿವರ ನೀಡುವುದು? ಪ್ರತಿ ಜಿಲ್ಲೆಯಲ್ಲಿ ಎಷ್ಟು ಮೊತ್ತದ ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ? ವಿವರ ನೀಡುವುದು?

ಆ) ಯಾವ ಯಾವ ಜಿಲ್ಲೆಗಳಲ್ಲಿ ಈ ಯೋಜನೆಯ ಅನುಷ್ಠಾನದಲ್ಲಿ ಅವ್ಯವಹಾರ ಹಾಗೂ ಕಳಪೆ ಕೆಲಸಗಳಾಗಿರುವುದು ವರದಿಯಾಗಿದೆ?

ಇ) ಕಳಪೆ ಕಾಮಗಾರಿಗೆ ಸಂಬಂಧಿಸಿದಂತೆ ಎಷ್ಟು ಜನ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ?

ಉತ್ತರ

ಅ) ವಿಶ್ವಬ್ಯಾಂಕ್ ನೆರವಿನಡಿ ಕುಡಿಯುವ ನೀರು ಸರಬರಾಜು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿರುವ ಜಿಲ್ಲೆಗಳ ವಿವರಗಳು ಮತ್ತು ಪ್ರತಿ ಜಿಲ್ಲೆಯಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಗಳ ಮೊತ್ತ ಈ ಕೆಳಗಿನಂತಿರುತ್ತದೆ.

ಕ್ರ. ಸಂ.	ಜಿಲ್ಲೆಗಳ ಹೆಸರು	ಆರಂಭ ವಾದಾಗಿನಿಂದ ಕಾಮಗಾರಿಗಳ ಮೊತ್ತ (ರೂ. ಕೋಟಿಗಳಲ್ಲಿ)	ಕೈಗೊಳ್ಳಲಾದ ಕಾಮಗಾರಿಗಳ ಸಂಖ್ಯೆ			
			ಮಾದರಿ	ಹಂತ-1	ಹಂತ-2	ಒಟ್ಟು
1	ಬೆಂಗಳೂರು ಗ್ರಾ	11.24	1	23	42	66
2	ಮಂಡ್ಯ	27.69	1	27	60	88
3	ಮೈಸೂರು	27.71	1	26	79	106
4	ದಕ್ಷಿಣ ಕನ್ನಡ	30.68	1	19	59	79
5	ಶಿವಮೊಗ್ಗ	25.34	1	26	57	84
6	ಬಳ್ಳಾರಿ	34.23	-	25	59	84
7	ಬೀದರ್	25.46	1	16	77	94
8	ರಾಯಚೂರು	42.37	1	25	82	108
9	ಬೆಳಗಾಂ	58.66	1	24	77	102
10	ಗುಲ್ಬರ್ಗಾ	29.63	2	26	72	100
11	ಹಾಸನ	18.52	-	-	96	96
12	ತುಮಕೂರು	19.67	-	-	97	97
	ಒಟ್ಟು	351.20	10	237	857	1104

ಆ) ರಾಯಚೂರು ಯೋಜನಾ ಜಿಲ್ಲೆ (ರಾಯಚೂರು ಮತ್ತು ಕೊಪ್ಪಳ)

ಕೊಪ್ಪಳ ಜಿಲ್ಲೆಯ (ರಾಯಚೂರು ಯೋಜನಾ ಜಿಲ್ಲೆ) ಕುಷ್ಟಗಿ ತಾಲ್ಲೂಕಿನ ಹನುಮನಹಾಳ, ನಿಲಗೋಲ, ತುಗ್ಗಲದೋಣಿ, ಹುಲಿಗೇರಾ ಮತ್ತು ಚಲಗೇರ ಗ್ರಾಮಗಳಲ್ಲಿ ಪರಿಸರ ನೈರ್ಮಲ್ಯ (ಚರಂಡಿ ಇತ್ಯಾದಿ) ಕಾಮಗಾರಿಗಳನ್ನು ಕಳಪೆ ಗುಣಮಟ್ಟದಲ್ಲಿ ಅನುಷ್ಠಾನಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿತ್ತು. ಈ ಕಾಮಗಾರಿಗಳ ಪರಿವೀಕ್ಷಣೆ ಮತ್ತು ಪ್ರಾರಂಭಿಕ ತನಿಖೆಯಲ್ಲಿ ಕಳಪೆ ಕಾಮಗಾರಿ ಹಾಗೂ ಕೆಲಸ ಮಾಡಿರುವುದಕ್ಕಿಂತ ಹೆಚ್ಚಿನ ಅಳತೆ ಮಾಡಿರುವುದು ಕಂಡುಬಂದಿರುತ್ತದೆ. ತನಿಖೆಯ ಪ್ರಕಾರ ರೂ. 39.75 ಲಕ್ಷಗಳ (5 ಗ್ರಾಮಗಳಿಗೆ) ಹೆಚ್ಚುವರಿ ಮೊತ್ತ ಪಾವತಿಯಾಗಿರುತ್ತದೆಂದು ಅಂದಾಜು ಮಾಡಲಾಗಿರುತ್ತದೆ.

ಶಿವಮೊಗ್ಗ ಯೋಜನಾ ಜಿಲ್ಲೆ (ಶಿವಮೊಗ್ಗ ಹಾಗೂ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕು)

ಶಿವಮೊಗ್ಗ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅವರ ದಿನಾಂಕ 10-12-2001ರ ಪತ್ರದಲ್ಲಿ ಶಿವಮೊಗ್ಗ ತಾಲ್ಲೂಕು ಹಾರನಹಳ್ಳಿ ಗ್ರಾಮದ ನೀರು ಸರಬರಾಜು ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವ ಗುತ್ತಿಗೆದಾರರಿಗೆ ರೂ. 8.18 ಲಕ್ಷಗಳ ಹೆಚ್ಚುವರಿ ಹಣ ಪಾವತಿ ಮಾಡಲಾಗಿರುತ್ತದೆಂದು ವರದಿ ಮಾಡಿರುತ್ತಾರೆ.

ಬೀದರ್ ಯೋಜನಾ ಜಿಲ್ಲೆ

ಬೀದರ್ ಜಿಲ್ಲೆಯಲ್ಲಿ ನೀರು ಸರಬರಾಜು ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿರುವ ಗುತ್ತಿಗೆ ದಾರರಿಗೆ ರೂ. 46.60 ಲಕ್ಷಗಳ ಹೆಚ್ಚುವರಿ ಹಣ ಪಾವತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿತ್ತು.

ಇ) ಓರ್ವ ಕಾರ್ಯಪಾಲಕ ಅಭಿಯಂತರರು, ಮೂರು ಸಹಾಯಕ ಕಾರ್ಯಪಾಲಕ ಅಭಿಯಂತರರು (ಪ್ರಭಾರ ಕಾರ್ಯಪಾಲಕ ಅಭಿಯಂತರರು) ಮತ್ತು ಸಹಾಯಕ ಅಭಿಯಂತರರ ಮೇಲೆ ಕ್ರಮ ಕೈಗೊಳ್ಳಲಾಗಿದೆ.

ಯೂನಿವರ್ಸಿಟಿಗಳಲ್ಲಿ ಸಿ.ಇ.ಟಿ. ಮಾದರಿಯಲ್ಲಿ ಮೌಲ್ಯಮಾಪನ ಪಾರದರ್ಶಕತೆಯನ್ನು ತರುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1120(912)